bwssb.gov.in

Telephone: 080-22945253

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

# BANGALORE WATER SUPPLY AND SEWERAGE BOARD

## ಮುಖ್ಯ ಅಭಿಯಂತರರು(ವಿನ್ಯಾಸ) ರವರ ಕಛೇರಿ

9 ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009

ಸಂ: ಬೆಂ.ಜ.ಮಂ/ಮು.ಅ(ವಿ)/ಅ.ಮು.ಅ(ವಿ)/ತಾ.ಸ(ವಿ) /04 / 2022-23 ದಿನಾಂಕ: 05 .04.2022

---

## ತಿದ್ದುಪಡಿ ಜ್ಞಾಪನಾ ಪತ್ರ

ವಿಷಯ: ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ಅನುಸೂಚಿ ದರಪಟ್ಟಿ: 2021-22 ರಲ್ಲಿ ಕೆಲವು ಕೊಳವೆಗಳ ದರಗಳ ಪರಿಷ್ಕರಣೆ.

ಉಲ್ಲೇಖ: 1. ಆ.ಸಂ: ಲೋ.ಇ-51 ಆರ್‌ಡಿಎಫ್ 2019, ಬೆಂಗಳೂರು ದಿ:25.03.2022.

2. ಸ.ಆ.ಸಂ.ನ.ಅ.ಇ 08/ಐಎನ್ಐ2021 (ಇ-ಕಛೇರಿ), ಬೆಂಗಳೂರು ದಿ:04.12.2021.

3. ಖಾಯಂ ದರಪಟ್ಟಿ ತಯಾರಿಕಾ ಸಮಿತಿಯ ದಿನಾಂಕ:01.04.2022 ರ ನಡಾವಳಿಗಳು.

4.ಸಂ.ಬೆಂ.ಜ.ಮಂ/ಮು.ಅ(ವಿ)/ಅ.ಮು.ಅ(ವಿ)/ಟಿ.ಎ(ವಿ)/2659/2021-22 ದಿ:25.03.2022

5. ಬೆಂ.ಜ.ಮಂ/ಮು.ಅ (ವಿ)/ಅ.ಮು.ಅ(ವಿ)/ತಾ.ಸ(ವಿ)/02/2021-22 ದಿ:04.04.2022

*****

## ಪ್ರಸ್ತಾವನೆ:

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ಅನುಸೂಚಿ ದರಪಟ್ಟಿ:2021-22 ನ್ನು ದಿನಾಂಕ:25.03.2022 ರಿಂದ ಜಾರಿಗೆ ಬರುವಂತೆ ಉಲ್ಲೇಖ (4) ರ ಜ್ಞಾಪನಾ ಪತ್ರದಲ್ಲಿ ಅಳವಡಿಕೆಗೆ ಪ್ರಕಟಿಸಲಾಗಿದೆ.

ಸದರಿ ಏಕರೂಪ ಅನುಸೂಚಿ ದರಪಟ್ಟಿ 2021-22 ರ ತಯಾರಿಕೆಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದ ಸಾಮಾಗ್ರಿಗಳಾದ ವಿವಿಧ ಕೊಳವೆಗಳಿಗೆ 2021-22 ಸಾಲಿನ 1 ನೇ ಮತ್ತು 2 ನೇ ತ್ರೈ ಮಾಸಿಕದಲ್ಲಿದ್ದಂತಹ ಮೂಲ ದರಗಳನ್ನು ಪರಿಗಣಿಸಲಾಗಿದೆ. ತದನಂತರದ ಅವಧಿಯಲ್ಲಿ ಈ ಸಾಮಾಗ್ರಿಗಳ ಮೂಲ ದರದಲ್ಲಿ ವ್ಯತ್ಯಯವಾಗಿರುತ್ತದೆ. ಅದರಲ್ಲೂ ಮಾರ್ಚ್-2022 ರ ತಿಂಗಳಿನಲ್ಲಿ D.I, M.S, HDPE, PVC, G.I Pipes ಗಳ ದರಗಳು ಬಹಳ ಹೆಚ್ಚಾಗಿರುತ್ತವೆ.

ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ "ಮುಖ್ಯ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ, ಇವರು ಕೆ.ಯು.ಡಬ್ಲ್ಯು.ಎಸ್.ಎಸ್.ಬಿ, ಮತ್ತು ಆರ್.ಡಿ.ಡಬ್ಲ್ಯು&ಎಸ್.ಡಿ ಇಲಾಖೆಗಳೊಂದಿಗೆ ಸಮಾಲೋಚಿಸಿ ಎಲ್ಲಾ ರೀತಿಯ ಕೊಳವೆಗಳ (Pipes) ಬೆಲೆಗಳನ್ನು ಪ್ರತಿ ತ್ರೈಮಾಸಿಕ ಅವಧಿಗೆ ಅಥವಾ ಶೇ. 10% ಕ್ಕಿಂತ ದರ ವ್ಯತ್ಯಾಸವಾದಲ್ಲಿ ಪರಿಷ್ಕೃತ ದರಗಳನ್ನು ಪ್ರಕಟಮಾಡಬೇಕಾಗಿರುತ್ತದೆ.

ಈ ಸಂಬಂಧ ಉಲ್ಲೇಖ (2) ರ ಆದೇಶದನ್ವಯ ರಚಿತವಾಗಿರುವ ಮೂರು ಇಲಾಖೆಗಳ ಏಕರೂಪ ದರಪಟ್ಟಿ ತಯಾರಿಕೆ ಸಮಿತಿ ದಿ:28.03.2022 ಮತ್ತು ದಿ:01.04.2022 ರಂದು ಸಭೆ ಸೇರಿ, ವಿವಿಧ ಕೊಳವೆಗಳ ತಯಾರಕರು / ವಿತರಕರು / ಸರಬರಾಜುದಾರರಿಂದ Quotation ಗಳನ್ನು ಪಡೆದು ದರಗಳ ತುಲನ ಪಟ್ಟಿ ಗಮನಿಸಿ ಚರ್ಚಿಸಿ, ಬೆಲೆ ಶೇ.10% ಗಿಂತ ಹೆಚ್ಚಾಗಿರುವುದನ್ನು ಪರಿಶೀಲಿಸಿ ಪರಿಷ್ಕೃತ ದರದ ಬಗ್ಗೆ ಆದೇಶ ಹೊರಡಿಸಲು ತೀರ್ಮಾನಿಸಿತು.

ಅದರಂತೆ, ಉಲ್ಲೇಖ (5) ರ ಮಂಡಳಿಯ ಜ್ಞಾಪನಾ ಪತ್ರದಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ಅನುಸೂಚಿ ದರಪಟ್ಟಿ 2021-22 ರಲ್ಲಿನ ಕೆಲವು ಕೊಳವೆಗಳ ದರಗಳನ್ನು ಪರಿಷ್ಕರಿಸಿ ಆದೇಶಿಲಾಗಿತ್ತು. ಸದರಿ ಆದೇಶದಲ್ಲಿನ ನ್ಯೂನತೆಯನ್ನು ಸರಿಪಡಿಸಿದ್ದು, ಈ ಕೆಳಗಿನಂತೆ ಆದೇಶವನ್ನು ಓದಿಕೊಳ್ಳಲು ತಿಳಿಸಲಾಗಿದೆ.

**ಆದೇಶ:**

ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ದರಪಟ್ಟಿ: 2021-22 ರಲ್ಲಿನ ಈ ಕೆಳಗಿನ ಅಂಶಗಳ ದರಗಳನ್ನು ಕೋಷ್ಟಕದಲ್ಲಿ ಸೂಚಿಸಿರುವಂತೆ ಶೇಕಡವಾರು ಹೆಚ್ಚಳದೊಂದಿಗೆ ಅಳವಡಿಸಿಕೊಳ್ಳುವುದು ಉಳಿದಂತೆ ಸದರಿ ದರಪಟ್ಟಿ 2021-22 ಸಂಪುಟ – V ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಈ ಪರಿಷ್ಕೃತ ದರಗಳನ್ನು ರಾಜ್ಯ ವ್ಯಾಪ್ತಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳುವ ಎಲ್ಲಾ ಇಲಾಖೆಗಳಿಗೆ ಅನ್ವಯವಾಗುವಂತೆ ತಕ್ಷಣದಿಂದ ಹಾಗೂ ಮುಂದಿನ ಆದೇಶದವರೆಗೆ ಜಾರಿಗೆ ತರಲಾಗಿದೆ.

| S.L. No | Item in SR 2021-22 Volume-V | Code No in SR 2021-22 Volume-V | Percentage to be increased over existing finished rates in SR 2021-22 Volume-V |
|---|---|---|---|
| 1 | D.I Pipes | E010 & E020 | 35 |
| 2 | M.S.Pipes | F010 to F280 | 15 |
| 3 | HDPE Pipes | K010 to K100 | 34 |
| 4 | PVC Pipes | M010 & M150 | 26 |
| 5 | G.I.Pipes | N005, N010, N020 | 67 |
| 6 | Trenchless Works | U005, U007, U030 | 10 |

05/4/2022

ಮುಖ್ಯ ಅಭಿಯಂತರರು(ವಿನ್ಯಾಸ) (ಪ್ರಭಾರ)
ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಹಾಗೂ ಏಕರೂಪ ದರಪಟ್ಟಿ ಸಮಿತಿ ಸದಸ್ಯರು

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು, ಅನುಸೂಚಿ ದರಗಳ ಪರಿಶೀಲನಾ ಸಮಿತಿ ರವರ ಘನ ಮಾಹಿತಿಗಾಗಿ.
2. ಸರ್ಕಾರದ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು ಅನುಸೂಚಿ ದರಗಳ ರಚನಾ ಸಮಿತಿ ರವರ ಘನ ಮಾಹಿತಿಗಾಗಿ.
3. ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ/ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು / ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು, ರವರ ಘನ ಮಾಹಿತಿಗಾಗಿ.
4. ಸರ್ಕಾರದ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ (ವೆಚ್ಚ), ಬೆಂಗಳೂರು ರವರ ಘನ ಮಾಹಿತಿಗಾಗಿ.
5. ಅಧ್ಯಕ್ಷರು, ತಾಂತ್ರಿಕ ಕಾರ್ಯಪಡೆ, ಬೆಂಗಳೂರು, ಏಕರೂಪ ಅನುಸೂಚಿ ದರಪಟ್ಟಿ ರವರ ಘನ ಮಾಹಿತಿಗಾಗಿ.
6. ಪ್ರಧಾನ ಅಭಿಯಂತರರು/ಮುಖ್ಯ ಅಭಿಯಂತರರು BWSSB, KUWS&DB and RDW&SD ಹಾಗೂ ಸರ್ಕಾರದ ಇತರ ಇಲಾಖೆ / ನಿಗಮ /ಮಂಡಳಿ ರವರ ಮಾಹಿತಿಗಾಗಿ.
7. ಅಧೀಕ್ಷಕ ಅಬಿಯಂತರರು / ಅಪರ ಮುಖ್ಯ ಅಭಿಯಂತರರು BWSSB, KUWS&DB and RDW&SD ಹಾಗೂ ಸಮಿತಿಯ ಸದಸ್ಯರು ಹಾಗೂ ಸರ್ಕಾರದ ಇತರೆ ಇಲಾಖೆ/ನಿಗಮ ಮಂಡಳಿ ರವರ ಮಾಹಿತಿಗಾಗಿ.
8. ಎಲ್ಲಾ ಕಾರ್ಯ ಪಾಲಕ ಅಭಿಯಂತರರು ಸರ್ಕಾರದ ಎಲ್ಲಾ ಇಲಾಖೆ/ನಿಗಮ/ಮಂಡಳಿ ರವರ ಮಾಹಿತಿಗಾಗಿ.
9. ಕಛೇರಿ ಕಡತಕ್ಕಾಗಿ.